ಆಗಿಲ್ಲ. ನನ್ನ ಕ್ಷೇತ್ರವು ಅಲ್ಲಿ ಬರುತ್ತದೆ. ಇದಕ್ಕೆ ಒಂದು ಸಮಿತಿ ರಚನೆ ಮಾಡಿದರೆ ನಾವು ಏನು ಮಾಡಬೇಕು ಏನು ಮಾಡಬಾರದು ಎನ್ನುವುದನ್ನು ಹೇಳುತ್ತೇವೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಸ್ಪಷ್ಟ ಪಡಿಸಿದ್ದೇನೆ. ಮೊದಲು ಕಡ್ಡಾಯ ಇರಲಿಲ್ಲ. ಈಗ ಆಕ್ಟ್ ಮಾಡಿ ಕಡ್ಡಾಯ ಎಂದು ಮಾಡಿದ್ದಾರೆ. 2014–15 ರಿಂದ ಜಾರಿಗೆ ಬಂದಿದೆ ಅವರು specific ಆಗಿ ಮಾಡಿದ್ದಾರೋ ಇಲ್ಲವೋ ಎನ್ನುವುದನ್ನು ನೋಡಿಕೊಂಡು ಅದನ್ನು enforce ಮಾಡಲಿಕ್ಕೆ ಕಾನೂನನ್ನು expose ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : OK ಮಾನ್ಯ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ ನಿಮ್ಮ ಪ್ರಶ್ನೆಗೆ ಕಾಲಾವಕಾಶವನ್ನು ಕೇಳಿದ್ದಾರೆ. ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ, ತಮ್ಮ ಪ್ರಶ್ನೆ ಬೇರೆಯವರಿಗೆ ವರ್ಗಾವಣೆ ಆಗಿದೆ. ಶ್ರೀ ಬಸವರಾಜ ರಾಯರೆಡ್ಡಿ ತಮ್ಮ ಪ್ರಶ್ನೆಗೆ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು : ಅದು ಬೇರೆಯವರಿಗೆ ವರ್ಗಾವಣೆ ಆಗಿದೆ, ತಮಗೆ ಉತ್ತರ ಬರುತ್ತದೆ.

ಕಾಲುಬಾಯಿ ರೋಗದಿಂದ ಮೃತಪಟ್ಟ ಜಾನುವಾರುಗಳ ಮಾಲೀಕರಿಗೆ ಪರಿಹಾರ ನೀಡಿಕೆ

29 (248) ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ) :– ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶುಸಂಗೋಪನಾ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿ ಕಳೆದ ವರ್ಷ ಕಾಲುಬಾಯಿ ಜ್ವರದಿಂದ ಮೃತಪಟ್ಟ ಜಾನುವಾರಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಆ) ಈ ಕಾಲುಬಾಯಿ ರೋಗವನ್ನು ಪರಿಣಾಮಕಾರಿಯಾಗಿ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು; (ರೋಗ ನಿರೋಧಕ ಚುಚ್ಚುಮದ್ದನ್ನು ನೀಡಿರುವ ಬಗ್ಗೆ ವಿವರಗಳನ್ನು ಜಿಲ್ಲಾವಾರು ಒದಗಿಸುವುದು)

(ಇ) ಕಾಲುಬಾಯಿ ರೋಗದಿಂದ ಮೃತಪಟ್ಟ ಜಾನುವಾರುಗಳ ಮಾಲೀಕರಿಗೆ ಪೂರ್ಣ ಪ್ರಮಾಣದಲ್ಲಿ ಪರಿಹಾರ ನೀಡಲಾಗಿದೆಯೇ; ಮಂಜೂರು ಮಾಡಿದ ಪರಿಹಾರದ ಮೊತ್ತವೆಷ್ಟು;

(ಈ) ರೈತರಿಗೆ ಪರಿಹಾರ ನೀಡಿರುವ ಮೊತ್ತ ಎಷ್ಟು; ಇನ್ನೂ ನೀಡಬೇಕಾಗಿರುವ ಪರಿಹರದ ಮೊತ್ತವೆಷ್ಟು ? (ಜಿಲ್ಲಾವಾರು ವಿವರ ಒದಗಿಸುವುದು)

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶುಸಂಗೋಪನಾ ಸಚಿವರು):–

(ಅ) ದಿನಾಂಕ 01–09–2013 ರಿಂದ 20–12–2013 ರವರೆಗೆ ರಾಜ್ಯದಲ್ಲಿ ಕಾಲುಬಾಯಿ ರೋಗದಿಂದ ಮೃತಪಟ್ಟ ಜಾನುವಾರುಗಳ ಸಂಖ್ಯೆ 14,441. ಜಿಲ್ಲಾವಾರು ವಿವರವನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

(ಆ) ಕೇಂದ್ರ ಸರ್ಕಾರದ ಯೋಜನೆಯಾದ ಕಾಲುಬಾಯಿ ರೋಗ ನಿಯಂತ್ರಣದ ಅಡಿಯಲ್ಲಿ ಕೇಂದ್ರ ಸರ್ಕಾರವು ಸರಬರಾಜು ಮಾಡಿರುವ ಕಾಲುಬಾಯಿ ರೋಗದ ಲಸಿಕೆಯ ಮುಖಾಂತರ ರಾಜ್ಯದ ದನ ಮತ್ತು ಎಮ್ಮೆಗಳಿಗೆ ಲಸಿಕಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದ್ದು, ಈವರೆಗೂ ಮೊದಲನೆಯ ಸುತ್ತಿನಲ್ಲಿ ಶೇ. 58, ಎರಡನೆಯ ಸುತ್ತಿನಲ್ಲಿ ಶೇ. 82, ಮೂರನೆಯ ಸುತ್ತಿನಲ್ಲಿ ಶೇ. 73, ನಾಲ್ಕನೆಯ ಸುತ್ತಿನಲ್ಲಿ ಶೇ. 83, ಐದನೆಯ ಸುತ್ತಿನಲ್ಲಿ ಶೇ. 95 ಮತ್ತು ಆರನೆಯ ಸುತ್ತಿನಲ್ಲಿ ಶೇ. 96 ರಷ್ಟು ಲಸಿಕೆ ಹಾಕಲಾಗಿದೆ. ಏಳನೆಯ ಸುತ್ತಿನ ಲಸಿಕಾ ಕಾರ್ಯಕ್ರಮವನ್ನು ಆಗಸ್ಟ್ 2014 ರಿಂದ ಹಮ್ಮಿಕೊಳ್ಳಲಾಗಿದೆ. ಜಿಲ್ಲಾವಾರು ಲಸಿಕೆ ಹಾಕಿದ ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

(ಇ) ಈ ಕಾರ್ಯಕ್ರಮಕ್ಕಾಗಿ ಒಟ್ಟು ರೂ. 27,00,00,000/– ಗಳನ್ನು ಮಂಜೂರು ಮಾಡಲಾಗಿದೆ.

(ಈ) ರಾಜ್ಯದಲ್ಲಿ ದಿನಾಂಕ 01–09–2013 ರಿಂದ 20–12–2013 ರವರೆಗೆ ಮರಣ ಹೊಂದಿದ ಜಾನುವಾರುಗಳ ಮಾಲೀಕರಿಗೆ ಒಟ್ಟು ರೂ.23,73,90,100/– ಗಳನ್ನು ಪೂರ್ಣ ಪ್ರಮಾಣದಲ್ಲಿ ಪರಿಹಾರ ಧನವಾಗಿ ವಿತರಿಸಲಾಗಿದೆ. ಜಿಲ್ಲಾವಾರು ವಿವರವನ್ನು ಅನುಬಂಧ–3 ರಲ್ಲಿ ನೀಡಲಾಗಿದೆ. ಬಾಕಿ ಇರುವುದಿಲ್ಲ.

ಶ್ರೀ.ಜೆಲುವರಾಯಸ್ವಾಮಿ. ಎನ್. (ನಾಗಮಂಗಲ ವಿಧಾನ ಸಭಾ ಕ್ಷೇತ್ರ.) ವಿಧಾನ ಸಭಾ ಸದಸ್ಯರು ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 243 ಕ್ಕೆ ಅನುಬಂಧ-1

ದಿನಾಂಕ: 01-09-2013 ರಿಂದ 20-12-2013 ರವರೆಗೆ ಕಾಲು ಬಾಯಿ ರೋಗದಿಂದ ಮರಣ ಹೊಂದಿದ ಜಾನುವಾರುಗಳ ವಿವರ

Sl. No.	District Name	Milch Animals	Draft breed	Calves	Total
1	Bagalkote	27	5	24	56
2	Bangalore Rural	182	3	273	458
3	Bangalore Urban	220	0	320	540
4	Belgaum	300	33	44	377
5	Bellary	11	2	3	16
6	Bidar	25	3	16	44
7	Bijapur	2	3	1	6
8	Chamarajanagar	685	148	98	931
9	Chikkamagalur	54	2	49	105
10	Chitradurga	31	3	7	41
11	Davanagere	30	5	12	47
12	D.Kannada	5	0	1	6
13	Chikkaballapura	877	8	383	1268
14	Dharwad	77	12	54	143
15	Gadag	28	4	3	35
16	Hassan	199	14	41	254
17	Haveri	87	18	47	152
18	Kodagu	14	4	1	19
19	Kolar	1657	43	1387	3087
20	Koppal	74	20	32	126
21	Mandya	1966	504	901	3371
22	Mysore	451	11	258	720
23	Ramanagar	663	43	1336	2042
24	Tumkur	339	21	118	478
25	Shimoga	37	2	11	50
26	Udupi	5	0	1	6
27	U.Kannada	43	13	3	59
28	Raichur	4	0	0	4
29	Gulbarga	0	0	0	0
30	Yadagiri	0	0	0	0
	Total	8093	924	5424	14441

ಶ್ರೀ ಚಲುವರಾಯಸ್ವಾಮಿ, ಎನ್. (ನಾಗಮಂಗಲ ವಿಧಾನ ಸಭಾ ಕ್ಷೇತ್ರ.) ವಿಧಾನ ಸಭಾ ಸದಸ್ಯರು ರವರ ಚುಕ್ಕೆ ಗುರುತಿನ

ಪ್ರಶ್ನೆ ಸಂಖ್ಯೆ: 248 ಕ್ಕೆ ಅನುಬಂಧ- 2

ಕಾಲು ಬಾಯಿ ಜ್ವರ ರೋಗದ ವಿರುದ್ಧ ಹಾಕಲಾದ ಲಸಿಕಾ ಕಾರ್ಯಕ್ರಮದ ಜಿಲ್ಲಾವಾರು ವಿವರ

Sl. No.	Name of District	Actual Bovine population	1st round (Aug-Sept 2011)		2nd round (Feb-Mar 2012)		3rd round (Aug-Sept 2012)		4th round (Feb-Mar 2013).	
			No.	%	No.	%	No.	%	No.	%
1	Bagalkote	507723	268065	49	414534	82	463449	91	429651	85
2	Bangalore-Rural	146789	105714	55	109661	88	114684	92	129929	89
3	Bangalore-Urban	124990	94672	69	117166	94	97523	78	99792	80
4	Belgaum	1284292	1060326	73	1191285	93	1109643	86	1145149	89
5	Bellary	507778	340479	57	428721	84	385560	76	462714	91
6	Bidar	378092	248206	55	305060	81	280577	74	267683	71
7	Bijapur	407988	228699	49	336999	90	277488	74	342203	92
8	Chamarajanagar	282875	182088	60	263678	82	82005	25	220796	69
9	Chikkaballapura	423033	320279	60	349756	83	348449	82	368370	87
10	Chikkamagalur	284949	159684	56	183539	80	165380	72	204854	89
11	Chitradurga	312567	255092	53	279243	92	201995	66	253140	83
12	D.Kannada	309929	264269	64	271206	88	271803	88	244670	79
13	Davanagere	463064	409682	66	394249	85	378216	82	399735	86
14	Dharwad	272735	110119	34	279556	95	275794	94	263520	90
15	Gadag	207049	170608	71	186720	79	217644	92	187125	79
16	Gulbarga	571944	310525	49	382591	76	269727	53	543346	95
17	Hassan	827508	583837	71	606485	73	480698	58	607160	73
18	Haveri	391177	237689	55	353970	94	285558	76	338103	90
19	Kodagu	103574	94586	65	37277	33	58758	52	54460	48
20	Kolar	224356	215520	74	202422	90	208934	93	216130	96
21	Koppal	353814	229939	65	301693	85	259574	73	269739	76
22	Mandya	449646	211451	47	243252	54	264175	59	269619	60
23	Mysore	576110	383676	56	481315	84	488286	85	481360	84
24	Raichur	424994	182126	30	345877	81	196335	46	339501	80
25	Ramanagar	304482	176520	58	207755	91	150169	66	197334	86
26	Shimoga	721059	671456	87	446317	67	538083	81	591245	89
27	Tumkur	668109	432218	52	429258	80	318057	59	606784	91
28	U.Kannada	333121	255916	53	272297	74	259109	70	292088	79
29	Udupi	259307	213891	62	229694	91	176756	70	205942	82
30	Yadagiri	387616	170025	33	310524	72	278910	65	272090	63
	Total	12510670	8587357	58	9962100	82	8903339	73	10304232	83

Progress report of Vaccination under FMD-CP during the year 2013-14

Sl. No.	Name of District	Actual livestock population (as per the district reports)	5th round (Aug-Nov. 2013)	Percentage	6th round (Feb-Mar 2014)	Percentage
1	Bagalkote	528702	460067	87	520029	98
2	Bangalore Rural	167801	176794	101	164405	98
3	Bangalore Urban	151719	121590	80	146481	97
4	Belgaum	1395051	1288379	92	1349598	97
5	Bellary	466972	460767	99	453685	97
6	Bidar	382604	323836	84	368042	96
7	Bijapur	405733	379325	93	386157	95
8	Chamarajanagar	281295	277703	98	260741	93
9	Chitradurga	389371	417854	107	375115	96
10	Chikkaballapura	286425	259116	95	272999	95
11	Chikkamagalur	401100	369791	92	373100	93
12	D.Kannada	266136	255525	96	258347	97
13	Davanagere	483676	428738	88	470769	97
14	Dharwad	280718	269246	96	266008	95
15	Gadag	212468	198608	93	204681	96
16	Gulbarga	519090	530025	102	498850	96
17	Hassan	750962	698370	93	687965	92
18	Haveri	385532	368506	101	369174	96
19	Kodagu	120926	110144	91	109726	91
20	Kolar	262913	234271	91	250555	95
21	Koppal	311783	295673	89	289936	93
22	Mandya	460502	486432	106	446277	97
23	Mysore	576364	537479	93	567292	98
24	Raichur	445262	419300	94	400424	90
25	Ramanagar	265893	263967	99	257103	97
26	Shimoga	663630	632902	95	616926	93
27	Tumkur	573264	627271	109	545946	95
28	U.Kannada	431073	418294	97	420429	98
29	Udupi	255359	239800	94	248739	97
30	Yadagiri	398063	359879	77	381140	96
	Total	125,20,387	1,19,09,952	95	119,60,639	96

ಶ್ರೀ ಜೆಲುವರಾಯಸ್ವಾಮಿ, ಎಸ್. (ನಾಗಮಂಗಲ ವಿಧಾನ ಸಭಾ ಕ್ಷೇತ್ರ.) ವಿಧಾನ ಸಭಾ ಸದಸ್ಯರು ರವರ ಚುಕ್ಕೆ ಗುರುತಿನ

ಪ್ರಶ್ನೆ ಸಂಖ್ಯೆ: 248 ಕ್ಕೆ ಅನುಬಂಧ- 3

ಕಾಲು ಬಾಯಿ ರೋಗದಿಂದ ಮರಣ ಹೊಂದಿದ ಜಾನುವಾರುಗಳ ಮಾಲೀಕರಿಗೆ ನೀಡಿದ ಪರಿಹಾರ ಧನದ ಜಿಲ್ಲಾವಾರು

ವಿವರ

SL NO	DISTRICT	MILCH ANIMALS	DRAFT	CALVES	TOTAL ANIMALS	MILCH AMT	DRAFT AMT	CALVES AMT	TOTAL
1	BAGALKOT	27	5	24	56	670000	100000	185300	955300
2	BANGALORE RURAL	182	3	273	458	4544000	60000	2251000	6855000
3	BANGALORE URBAN	220	0	320	540	5500000	0	2325000	7825000
4	BELGUM	300	33	44	377	6614000	790000	263090	7667000
5	BELLARY	11	2	3	16	269000	50000	6200	325200
6	BIDAR	25	3	16	44	625000	60000	160000	845000
7	BIJAPUR	2	3	1	6	50000	60000	10000	120000
8	CHAMRAJNAGAR	685	148	98	931	14334000	1759000	502000	16595000
9	CHIKKAMAGALORE	54	2	49	105	1350000	20000	500000	1870000
10	CHITRADURGA	31	3	7	41	575000	115000	95000	785000
11	DAVANGERE	30	5	12	47	750000	100000	120000	970000
12	DAKSHIN KANNADA	5	0	1	6	97000	0	18000	115000
13	CHIKKABALLAPURA	877	8	383	1268	20749000	143000	3906000	24798000
14	DHARWAD	77	12	54	143	1925000	240000	540000	2705000
15	GADAG	28	4	3	35	700000	80000	30000	810000
16	HASAN	199	14	41	254	4486000	200000	386000	5072000
17	HAVERI	87	18	47	152	1729500	320000	204000	2253500
18	KODAGU	14	4	1	19	325000	42000	8000	375000
19	KOLAR	1652	43	1387	3082	42535000	860000	9840000	53235000
20	KOPPAL	74	20	32	126	1509000	339000	181000	2029000
21	MANDYA	1966	504	901	3371	43606500	3458000	6024000	53088500
22	MYSORE	451	11	258	720	8803450	220000	2923850	11947300
23	RAMNAGAR	663	43	1336	2042	15427500	681000	8906300	25014800
24	SHIMOGGA	37	2	11	50	850000	138000	70000	1058000
25	TUMKUR	339	21	118	478	7077000	375000	1187500	8639500
26	UDAPI	5	0	1	6	125000	0	10000	135000
27	UTTARA KANNADA	43	13	3	59	938000	248000	16000	1202000
28	RAICHUR	4	0	0	4	100000	0	0	100000
29	GULBERGA	0	0	0	0	0	0	0	0
30	YADGIR	0	0	0	0	0	0	0	0
	TOTAL	8088	924	5424	14436	186263950	10458000	40668150	237390100

ಶ್ರೀ ಎನ್. ಚೆಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ಉತ್ತರ ಬಂದಿದೆ. ಮಾನ್ಯ ಸಚಿವರಿಗೆ ಮತ್ತು ಸರ್ಕಾರಕ್ಕೆ ತುಂಬಾ ಧನ್ಯವಾದಗಳು. ಹೈನುಗಾರಿಕೆಯಲ್ಲಿ ಬಹಳ ತೊಂದರೆ ಇದೆ. ಎರಡು ಉಪ ಪ್ರಶ್ನೆಯನ್ನು ಕೇಳಿ ಬಿಡುತ್ತೇನೆ. ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಕಂಪ್ಲೀಟ್ ಆಗಿ ಲಸಿಕೆ ಹಾಕುವುದು ಆಗುತ್ತಿಲ್ಲ. ನಿಮ್ಮ ಅಧಿಕಾರಿಗಳ ಸಂಖ್ಯೆ ಕಡಿಮೆ ಇದೆ. ನಿಮ್ಮಿಂದ deputation ಹೋಗಿರುವವರು ಜಾಸ್ತಿ ಇದ್ದಾರೆ. ಉದಾಹರಣೆಗೆ ಡಾ. ರಾಜಾ ನಾಯಕ್ ಎನ್ನುವವರು ನಿಮ್ಮ ಇಲಾಖೆಯಿಂದ deputation ಹೋಗಿ 17 ವರ್ಷವಾಯಿತು. ಅವರನ್ನು ವಾಪಸ್ಸು ಪಡೆಯಬೇಕು. ನೇಮಕಾತಿಯನ್ನು ಚುರುಕು ಮಾಡಬೇಕು. ನೀವು retire ಆದವರನ್ನು on contract ಮೇಲೆ ತೆಗೆದುಕೊಳ್ಳುತ್ತೇನೆಂದು ಆಶ್ವಾಸನೆಯನ್ನು ಕೊಟ್ಟಿದ್ದೀರಾ? ಇವರನ್ನು ತೆಗೆದುಕೊಂಡು ರೈತರಿಗೆ ಆಗಿರುವ ತೊಂದರೆಯನ್ನು ಪರಿಹರಿಸಿ, ರೈತರಿಗೆ ಹೈನುಗಾರಿಕೆ ಬೆನ್ನೆಲುಬಾಗಿದೆ. ನೀವು ಹೈನುಗಾರಿಕೆಯನ್ನು strengthen ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕಂಥದ್ದು ಸತ್ಯವಾಗಿದೆ. ನಾವು ಈಗಾಗಲೇ deputation ಮೇಲೆ ಹೋಗಿರತಕ್ಕಂಥ ಸುಮಾರು 21 ಜನ ಅಧಿಕಾರಿಗಳನ್ನು ನಮ್ಮ ಮೂಲ ಇಲಾಖೆಗೆ ವಾಪಸ್ಸು ಬರಬೇಕೆಂದು ಹೇಳಿ ತೀರ್ಮಾನ ಮಾಡಿದ್ದೇವೆ. ಅವರು ಈಗಾಗಲೇ ಕೋರ್ಟಿನಲ್ಲಿ ವ್ಯಾಜ್ಯ ಹೂಡಿರುವುದರಿಂದ ಆ ಕಾರಣಕ್ಕೋಸ್ಕರ ಅದು ಸ್ಥಗಿತವಾಗಿದೆ. ಅವರ ಜೊತೆಗೆ ಈಗ ನಮ್ಮಲ್ಲಿ ಇರತಕ್ಕಂಥದ್ದು 6ನೇ ಸುತ್ತಿನ ಪಲ್ಸ್ ಪೋಲಿಯೋ ಧಾಟಿಯಲ್ಲಿ ಸುಮಾರು 98% vaccination ಅನ್ನು ಮಾಡಿರುವಂಥದ್ದು, ಅದರ ಪ್ರಯುಕ್ತ ಒಂದೇ ಒಂದು vaccination ಮುಗಿದ ಮೇಲೆ FMD ಯಿಂದ ಸತ್ತಿರತಕ್ಕಂಥದ್ದು ನಮಗೆ ಇಲ್ಲಿಯವರೆಗೆ ಯಾವ ಪ್ರಕರಣಗಳೂ ಕಾಣಲಿಲ್ಲ. ಅಂದರೆ ಯಶಸ್ವಿಯಾಗಿದೆ. vaccination ಮುಖಾಂತರ ಆ ರೋಗವನ್ನು ನಿಯಂತ್ರಣ ಮಾಡುವುದನ್ನು ಬಿಟ್ಟರೆ ಬೇರೆ ಯಾವ ಮಾರ್ಗವೂ ಇಲ್ಲ. 7ನೇ ಸುತ್ತಿನ FMD ಲಸಿಕೆ ಹಾಕತಕ್ಕಂಥದ್ದು. ಈಗ ಆಗಸ್ಟ್‌ದಿಂದ ಪ್ರಾರಂಭವಾಗುತ್ತದೆ. ನಾವು ಹೋದ ವರ್ಷ ಯಾವ ರೀತಿ ಪಲ್ಸ್ ಪೋಲಿಯೋ

ಮಾದರಿಯಲ್ಲಿ ಮಾಡಿದ್ದೇವೆ? ಅದೇ ಮಾದರಿಯಲ್ಲಿ ಮಾಡುವುದಕ್ಕೆ ಎಲ್ಲಾ ರೀತಿಯ ತಯಾರಿಯನ್ನು ಮಾಡಿದ್ದೇವೆ. ಭಾರತ ಸರ್ಕಾರವು ಕೂಡ ನಮಗೆ 10 ಕೋಟಿ ರೂ.ಗಳನ್ನು ಕೊಟ್ಟಿದೆ. vaccination ಅನ್ನು ಕೂಡ ಉಚಿತವಾಗಿ ಕೊಡುತ್ತಾರೆ. vaccination ಗೋಸ್ಕರ ದುಡ್ಡು ಖರ್ಚಾಗಿರುವುದು ಹೋದ ವರ್ಷ ಮಾತ್ರ, ಈ ವರ್ಷವೂ ಕೂಡ ಅದಕ್ಕೆ ಹಣ ಕೂಡ ಇದೆ, vaccination ಕೂಡ ಈ ವರ್ಷ 100% ರೀಚ್ ಮಾಡಬೇಕೆಂದು ನಮ್ಮ ಗುರಿ ಆಗಿದೆ, ನಾವು ಅದನ್ನು ಸಾಧನೆ ಮಾಡುತ್ತೇವೆ. ಆದರೆ ತಾವು recruitment ಬಗ್ಗೆ ಮತ್ತು staff ತೊಂದರೆ ಆಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. 233 ಜನ Veterinary Assistant ಗಳಿಗೆ ನೇಮಕಾತಿಯ Orders ಗಳನ್ನು ಇನ್ನೊಂದು ವಾರದಲ್ಲಿ ಕೊಟ್ಟು Postings ಕೊಡುತ್ತಿದ್ದೇವೆ. ಹಾಗಾಗಿ ತೊಂದರೆ ಆಗುವುದಿಲ್ಲ. ಹೊಸದಾಗಿ ಕೂಡ ಈಗಾಗಲೇ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವ ರೀತಿಯಲ್ಲಿ 250 ಹುದ್ದೆಗಳು ಮತ್ತು retire ಆದವರನ್ನು 250 ಜನರನ್ನು ತೆಗೆದುಕೊಳ್ಳಬೇಕೆನ್ನುವ ಪ್ರಸ್ತಾವವು ಇದೆ. ಈಗಾಗಲೇ Veterinary Doctors ಗಳು 350 ಜನ ಇರುವುದರಿಂದ ಏನೂ ತೊಂದರೆ ಆಗುವುದಿಲ್ಲ. Recruitment ಗೆ ಆದಷ್ಟು ಬೇಗನೆ ಚಾಲನೆಯನ್ನು ಕೊಡುತ್ತೇವೆ. ಬಹುಶಃ ಇನ್ನು ಮುಂದೆ ಯಾವ ರೀತಿಯಲ್ಲಿಯೂ ವೈದ್ಯಾಧಿಕಾರಿಗಳ ಕೊರತೆಗಳು ಬರದೇ ಇರುವ ರೀತಿಯಲ್ಲಿ ನಾವು ಎಲ್ಲಾ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಎನ್. ಚೆಲುವರಾಯಸ್ವಾಮಿ : ಗಂಟಲು ಬೇನೆಯಿಂದ ಮಂಡ್ಯದಲ್ಲಿ 20 ಹಸುಗಳು ಸತ್ತಿವೆ. ದಯಮಾಡಿ ತಾವು ಅದರ ಕಡೆಗೂ ಗಮನವನ್ನು ಹರಿಸಿ.

ಶ್ರೀ ಟಿ.ಬಿ. ಜಯಚಂದ್ರ : FMD ಮತ್ತು ಗಂಟಲು ಬೇನೆ ಇವೆಲ್ಲ Brothers and Sisters ಇದ್ದಂತೆ. ಅದು ಬಂದಾಗ ಇದು ಬಂದೇ ಬರುತ್ತದೆ. ನಾವು ಅದರ ಬಗ್ಗೆಯೂ ಗಮನವನ್ನು ಕೊಡುತ್ತೇವೆ.

ಅಧ್ಯಕ್ಷರು : ಆಯಿತು. ಮೋಹಿಯುದ್ದಿನ್ ಬಾವಾ ಬಿ.ಎ. ನಿಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ, ಕಾಲಾವಶಾವನ್ನು ಕೇಳಿದ್ದಾರೆ. ಈಗ ಪ್ರಶ್ನೋತ್ತರ ಮುಕ್ತಾಯವಾಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.